911(1639) ಶ್ರೀ ಬಸವರಾಜು ಎ.ಎನ್.(ಅರಸೀಕೆರೆ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಜಲಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಉಪ ವಿಭಾಗಗಳಾವುವು? ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ? ಅವರಿಗೆ ಪಂಚಿಂಗ್ ವ್ಯವಸ್ಥೆ ಜಾರಿಗೊಳಿಸಲಾಗಿದೆಯೇ :

ಆ) ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಉಪ ವಿಭಾಗೀಯ ಕಛೇರಿಗಳಲ್ಲಿ ನೌಕರರು ಸಾರ್ವಜನಿಕರಿಗೆ ಲಭ್ಯವಾಗುವಂತೆ ಪ್ರಧಾನ ಕಛೇರಿಯಲ್ಲಿ ಅಳವಡಿಸಿರುವಂತೆ ಎಲ್ಲಾ ಉಪ ವಿಭಾಗೀಯ ಕಛೇರಿಗಳಲ್ಲಿ ಥಂಬ್–ಪಂಚಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದೆ? ಹಾಗಿದ್ದಲ್ಲಿ ಎಂದಿನಿಂದ ಜಾರಿಗೊಳಿಸಲಾಗುವುದು :

ಇ) ನಗರದ ಹೊರವಲಯದಲ್ಲಿ ವಾಸಿಸುವ ಮಂಡಲಿಯ ಗ್ರಾಹಕರಿಗೆ ಅನುಕೂಲವಾಗುವಂತೆ ಹೊಸ ಉಪವಿಭಾಗೀಯ ಕಛೇರಿಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆಯೇ ? ಹಾಗಿದ್ದಲ್ಲಿ ಪ್ರಸ್ತುತ ವರ್ಷ ತೆರೆಯಲಾಗುವ ಹೊಸ ಕಛೇರಿಗಳಾವುವು ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಜಲಮಂಡಲಿಯಲ್ಲಿ ಪ್ರಧಾನ ಕಛೇರಿಯನ್ನೊಳಗೊಂಡಂತೆ 24 ವಿಭಾಗೀಯ ಕಛೇರಿಗಳು ಮತ್ತು 49 ಉಪ ವಿಭಾಗೀಯ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಮಂಡಲಿಯಲ್ಲಿ ಒಟ್ಟು 2653 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾವೇರಿ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಧಾನ ಕಛೇರಿ ಮತ್ತು ಇತರೇ ಕಛೇರಿಗಳ 260 ಸಿಬ್ಬಂದಿಗಳಿಗೆ ಮಾತ್ರ ಸ್ಮಾರ್ಟ್ ಕ್ಷಾರ್ಡ್ ಪಂಚಿಂಗ್ ವ್ಯವಸ್ಥೆ ಜಾರಿಯಲ್ಲಿದೆ.

ಆ) ಮಂಡಲಿಯ ಪರಿಶೀಲನೆಯಲ್ಲಿದೆ.

ಇ) ಹೌದು. ಯಲಹಂಕ ಉಪನಗರದಲ್ಲಿ ಒಂದು ಉಪ ವಿಭಾಗೀಯ ಕಛೇರಿಯನ್ನು ತೆರೆಯುವ ಯೋಜನೆ ಇರುತ್ತದೆ. ಇದನ್ನು ವರ್ಷಾಂತ್ಯದ ವೇಳೆಗೆ ಪ್ರಾರಂಭಿಸುವ ಉದ್ದೇಶವಿದೆ.

914(1016) ಶ್ರೀ ಚಂದ್ರಶೇಖರ ಪಾಟೀಲ್ ರೇವೂರ.(ಗುಲ್ಬರ್ಗಾ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಎಷ್ಟು ಹೊಸ ಬಡಾವಣೆಗಳನ್ನು ನಿರ್ಮಿಸಲಾಗಿದೆ (ಬಡಾವಣೆ ಹೆಸರು ನಿವೇಶನಗಳ ಸಂಖ್ಯೆಯ ಸಹಿತ ವಿವರ ನೀಡುವುದು);

ಆ) ಹೊಸದಾಗಿ ನಿರ್ಮಿಸಿದ ಎಲ್ಲಾ ಬಡಾವಣೆಗಳಲ್ಲಿ ಸಂಪೂರ್ಣ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ (ಒದಗಿಸಿದ್ದರ ಬಡಾವಣೆವಾರು ಸೌಕರ್ಯಗಳ ವಿವರ ನೀಡುವುದು) :

ಇ) ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದಿಂದ ಈಗ ಹೊಸ ಬಡಾವಣೆ ನಿರ್ಮಿಸಲು ಕೈಗೆತ್ತಿಕೊಂಡಿರುವ ಬಡಾವಣೆಗಳು ಯಾವುವು (ಯೋಜನೆಗಳ ಅಂದಾಜು ವೆಚ್ಚ ಮುಂತಾದ ವಿವರ ನೀರುವುದು)?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಹತ್ತು ಹೊಸ ಬಡಾವಣೆಗಳನ್ನು ನಿರ್ಮಿಸಲಾಗಿದೆ.